## 2015 ಕ.ತೀ.ವ 499

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್

### ಶ್ರೀ ಎನ್. ಶ್ರೀನಿವಾಸ –ವಿರುದ್ಧ– ಶ್ರೀ ಮುರುಳೇಶ್ ಮತ್ತು ಇತರರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

1957ರ ಕರ್ನಾಟಕ ಮುದ್ರಣ ಕಾಯಿದೆ ಕಲಂ 33.

ರಿಟ್ ಅರ್ಜಿದಾರರ ವಿರುದ್ಧ ಎದುರುದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಹೂಡಿರುತ್ತಾರೆ. ನಿಗಧಿತ 5 ತಿಂಗಳೊಳಗಾಗಿ ಸ್ವತ್ತನ್ನು ಹಸ್ತಾಂತರಿಸಿದ್ದರಿಂದ ಕಾಯಿದೆ ಅನುಚ್ಛೇದ 5(ಇ)(i)ರಡಿಯಲ್ಲಿ ಸೂಕ್ತ ಶುಲ್ಕವನ್ನು ವಾದಿಯವರು ನೀಡಬೇಕೆಂದು ಪ್ರತಿವಾದಿ/ರಿಟ್ ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ವಾದಿಸುತ್ತಾರೆ. ಪ್ರತಿವಾದಿಗಳ ಮಧ್ಯಂತರ ಅರ್ಜಿಯನ್ನು ವಜಾಗೊಳಸಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಕರಾರು ಪತ್ರದಲ್ಲಿ ಕ್ರಯಪತ್ರವನ್ನು ಕಾರ್ಯಗತಗೊಳಸುವ ಮುನ್ನವೇ ಸ್ವತ್ತಿನ ಹಸ್ತಾಂತರವಾಗಿದೆಯೆಂದು ಹೇಳಿಲ್ಲದ ಪರಿಣಾಮವಾಗಿ ಅನುಚ್ಛೇದ 5(ಇ)(i)ರ ಆಹ್ವಾನವೆನಿಸುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಸಿದೆ.

ಅರ್ಜಿದಾರರ ಪರ : ಶ್ರೀ ದಿನೇಶ್ ಗೌನ್‌ಕರ್ – ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಸಿ.ಎಂ.ನಾಗಭೂಷಣ – ವಕೀಲರು.

*ರಿಟ್ ಅರ್ಜಿ ಸಂ. 8460/2012 (ಜಿಎಂ–ಸಿಪಿಸಿ), ದಿನಾಂಕ: 5ನೇ ಮಾರ್ಚ್, 2014.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎನ್. ಕುಮಾರ್:**

ಕರ್ನಾಟಕ ಸ್ಟಾಂಪು ಅಧಿನಿಯಮ, 1957 (ಇನ್ನು ಮುಂದೆ ಸಂಕ್ಷಿಪ್ತವಾಗಿ ಅಧಿನಿಯಮವೆಂದು ಕರೆಯಲಾಗಿದೆ)ರ 33ನೇ ಪ್ರಕರಣದಡಿಯಲ್ಲಿ ಪ್ರಶ್ನಿತ ದಸ್ತಾವೇಜುಗಳನ್ನು ನಿರಾಕರಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಯು ಈ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾನೆ.

2. ವಾದಿಯು, ಮಾರಾಟ ಒಪ್ಪಂದದ ನಿರ್ದಿಷ್ಟ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾನೆ. ಮಾರಾಟದ ಒಪ್ಪಂದದಡಿಯಲ್ಲಿ ಅಧಿಭೋಗವನ್ನು ಐದು ತಿಂಗಳೊಳಗೆ ಬಿಟ್ಟುಕೊಡಬೇಕೆಂದು ಒಪ್ಪಿಕೊಳ್ಳಲಾಗಿದ್ದು, ತದನುಸಾರವಾಗಿ ಅದನ್ನು ಬಿಟ್ಟುಕೊಡಲಾಗಿತ್ತೆಂಬುದು ಅವನ ವಾದವಾಗಿರುತ್ತದೆ.. ಆದ್ದರಿಂದ, ಪ್ರಕರಣವು ಅಧಿನಿಯಮದ 5(ಇ)(i)ನೇ ಅನುಚ್ಛೇದದಡಿಯಲ್ಲಿ ಬರುತ್ತದೆ ಮತ್ತು ದಸ್ತಾವೇಜುಗಳಿಗೆ ಒಡಂಬಡಿಕೆ ಪತ್ರದಂತೆ ಸ್ಟಾಂಪು ಶುಲ್ಕವನ್ನು ಸಂದಾಯ ಮಾಡಬೇಕಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು, ಕರಾರನ್ನು ಭಾಗಶಃವಾಗಿ ಕಾರ್ಯರೂಪಕ್ಕೆ ತರುವ ಒಪ್ಪಂದದಡಿಯಲ್ಲಿ ಅಧಿಭೋಗವನ್ನು, ಬಿಟ್ಟುಕೊಡಲಾಗುವುದಿಲ್ಲ. ಆದರೆ ಒಪ್ಪಂದದ ದಿನಾಂಕದಿಂದ ಐದು ತಿಂಗಳೊಳಗೆ ಬಿಟ್ಟುಕೊಡಬೇಕೆಂದು ಒಪ್ಪಿಕೊಳ್ಳಲಾಗಿತ್ತೇ ಹೊರತು, ಒಪ್ಪಂದದಡಿಯಲ್ಲಿ ಅಲ್ಲವೆಂಬ ಆಧಾರದ ಮೇಲೆ ಸದರಿ ವಾದವನ್ನು ಒಪ್ಪಿಕೊಳ್ಳಲು ನಿರಾಕರಿಸಿರುತ್ತದೆ.

3. 5(ಇ)(i) ಅನುಚ್ಛೇದವು ಈ ಮುಂದಿನಂತಿರುತ್ತದೆ :

**ಅನುಚ್ಛೇದ ೫. ಒಪ್ಪಂದ ಅಥವಾ ಇದರ ದಾಖಲೆಗಳು ಅಥವಾ ಒಪ್ಪಂದದ ವಿವರಣ ಪತ್ರ :**

| | |
|---|---|
| **(ಇ)** ಕರಾರನ್ನು ಭಾಗಶಃವಾರಿ ಕಾರ್ಯರೂಪಕ್ಕೆ ತರುವುದು ಸ್ಥಿರಾಸ್ಥಿಯ ಮಾರಾಟಕ್ಕೆ ಸಂಬಂಧಿಸಿದ್ದಲ್ಲಿ | |
| (i) ಹಸ್ತಾಂತರಣ ಪತ್ರವನ್ನು ಅನುಷ್ಠಾನಕ್ಕೆ ತರದೆ ಸ್ವತ್ತಿನ ಆದಿಭೋಗವನ್ನು ಬಿಟ್ಟು ಕೊಡುವುದು ಅಥವಾ ಬಿಟ್ಟುಕೊಡಬೇಕೆಂದು ಒಪ್ಪಿಕೊಳ್ಳುವುದು. | ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಣ (ಸಂ. 20)ದಷ್ಟೇ ಸುಂಕವನ್ನು ವಿಧಿಸುವುದು:<br>ಪರಂತು, ಮುಂಚಿನ ಒಪ್ಪಂದದ ರದ್ದಿಯಾತಿಯ ಪತ್ರವನ್ನು ಅದೇ ಸದರಿ ಸ್ವತ್ತಿನ ಸಂಬಂಧದಲ್ಲಿ ಅದೇ ಸದರಿ ಪಕ್ಷಕಾರರಿಂದ ಮತ್ತು ಅವರ ನಡುವೆಯೇ ಕಾರ್ಯರೂಪಕ್ಕೆ ತಂದಿರುವೆಡೆಯಲ್ಲಿ ಮತ್ತು ಸರಿಯಾದ ಸ್ಟಾಂಪು ಶುಲ್ಕವನ್ನು ಅಂಥ ಒಪ್ಪಂದದ ಮೇಲೆ, ಸಂದಾಯ ಮಾಡಲಾಗಿದ್ದಲ್ಲಿ, ತರುವಾಯ, ಅಂಥ "ರದ್ದಿಯಾತಿಯ ಪತ್ರ"ದ ಮೇಲಿನ ಸುಂಕವು ಐದು ನೂರು ರೂ.ಗಳನ್ನು ಮೀರತಕ್ಕದ್ದಲ್ಲ. |

4. ಆದ್ದರಿಂದ, 5(ಇ)(i) ಅನುಚ್ಛೇದದಡಿಯಲ್ಲಿ ಸ್ಟಾಂಪು ಶುಲ್ಕವನ್ನು ಅನ್ವಯಿಸಲು, ಈ ಮುಂದಿನ ಎರಡು ಷರತ್ತುಗಳನ್ನು ಪೂರೈಸಬೇಕಾಗುತ್ತದೆ :

ಎ. ಕರಾರನ್ನು ಭಾಗಶಃವಾಗಿ ಕಾರ್ಯರೂಪಕ್ಕೆ ತರುವಲ್ಲಿ, ಸ್ವತ್ತಿನ ಅಧಿಭೋಗವನ್ನು ಬಿಟ್ಟುಕೊಡಬೇಕಾಗುತ್ತದೆ;

ಬಿ. ಕರಾರನ್ನು ಭಾಗಶಃವಾಗಿ ಕಾರ್ಯರೂಪಕ್ಕೆ ತರುವಲ್ಲಿ, ಹಸ್ತಾಂತರವನ್ನು ಮಾಡದೆಯೇ ಅಧಿಭೋಗವನ್ನು ಬಿಟ್ಟುಕೊಡಬೇಕೆಂದು ಒಪ್ಪಿಕೊಳ್ಳಲಾಗಿರುತ್ತದೆ.

5. ಸದರಿ ಉಪಬಂಧವನ್ನು ಅನ್ವಯಿಸಲು, ಒಪ್ಪಂದದಡಿಯಲ್ಲಿ ಅಧಿಭೋಗವನ್ನು ಬಿಟ್ಟುಕೊಡಲಾಗಿದೆಯೆಂಬ ಮಟ್ಟಿಗೆ ಮಾರಾಟ ಒಪ್ಪಂದದಲ್ಲಿ ಒಂದು ಒಕ್ಕಣೆಯಿರಬೇಕಾಗಿರುತ್ತದೆ. ಅಧಿಭೋಗವನ್ನು ಒಪ್ಪಂದದಡಿಯಲ್ಲಿ ವಾಸ್ತವಿಕವಾಗಿ ಬಿಟ್ಟುಕೊಡಲಾಗಿದೆ ಅಥವಾ ಇಲ್ಲ ಎಂಬುದು ಮುಖ್ಯವಾದ ವಿಷಯವಾಗಿರುವುದಿಲ್ಲ. ಅಂತೆಯೇ, ಅಧಿಭೋಗವನ್ನು ಒಪ್ಪಂದ ಮಾಡಿಕೊಳ್ಳುವುದಕ್ಕೆ ಮುಂಚಿತವಾಗಿಯಾಗಲೀ ಅಥವಾ ಒಪ್ಪಂದವನ್ನು ಮಾಡಿಕೊಂಡ ನಂತರವಾಗಲೀ ಬಿಟ್ಟುಕೊಡಲಾಗಿರುವುದು ಕೂಡ ಮುಖ್ಯವಾದ ವಿಷಯವಾಗಿರುವುದಿಲ್ಲ. ಅಧಿಭೋಗವನ್ನು ಐದು ತಿಂಗಳುಗಳ ತರುವಾಯ ಬಿಟ್ಟುಕೊಡಲಾಗುವುದೆಂಬ ಒಕ್ಕಣೆಯು, ಒಪ್ಪಂದದಡಿಯಲ್ಲಿ ಅಧಿಭೋಗವನ್ನು ಬಿಟ್ಟುಕೊಡುವುದಕ್ಕೆ ಕಾರಣವಾಗುವುದಿಲ್ಲ. ಅಂತೆಯೇ, ಅಧಿಭೋಗವನ್ನು ಬಿಟ್ಟುಕೊಡಲು ಒಪ್ಪಿಕೊಳ್ಳಲಾಗಿದೆಯೆಂಬ ಒಕ್ಕಣೆಯು, ಸ್ಟಾಂಪು ಸುಂಕವನ್ನು ಸಂದಾಯ ಮಾಡುವ ಬದ್ಧತೆಯನ್ನು ಅನ್ವಯಿಸಲು ಸಾಕಾಗುವುದಿಲ್ಲ. ಅಲ್ಲಿ, 'ಹಸ್ತಾಂತರಣವನ್ನು ಕಾರ್ಯರೂಪಕ್ಕೆ ತರದೆ', ಅಧಿಭೋಗವನ್ನು ಬಿಟ್ಟುಕೊಡಬೇಕೆಂದು ಒಪ್ಪಿಕೊಳ್ಳಲಾಗಿದೆಯೆಂಬ ಸ್ಪಷ್ಟ ಒಕ್ಕಣೆ ಇರಬೇಕಾಗುತ್ತದೆ. ಒಪ್ಪಿಕೊಂಡಂತೆ, ಒಪ್ಪಂದವನ್ನು ಕಾರ್ಯರೂಪಕ್ಕೆ ತರುವಲ್ಲಿ ಅಧಿಭೋಗವನ್ನು ಬಿಟ್ಟುಕೊಡಲಾಗಿದೆಯೆಂಬ ಮಟ್ಟಿಗೆ ಮಾರಾಟದ ಒಪ್ಪಂದದಲ್ಲಿ ಒಕ್ಕಣೆಯಿರುವುದಿಲ್ಲ. ಅಲ್ಲದೆ, ಹಸ್ತಾಂತರಣವನ್ನು ಕಾರ್ಯರೂಪಕ್ಕೆ ತರದೆ ಅಂಥ ಅಧಿಭೋಗವನ್ನು ಬಿಟ್ಟುಕೊಡಬೇಕೆಂದು ಒಪ್ಪಿಕೊಳ್ಳಲಾಗಿದೆಯೆಂಬ ಯಾವುದೇ ಒಕ್ಕಣೆಯಲ್ಲಿ ಇರುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, "ಐದು ತಿಂಗಳುಗಳ ತರುವಾಯ ಅಧಿಭೋಗವನಮ್ಮು ಬಿಟ್ಟುಕೊಡಲಾಗುವುದೆಂದು" ಮತ್ತು 'ಮೌಲ್ಯದ/

ಪರಿಗಣನೆಯ ಸಂದಾಯವಾದ ಮೇಲೆ, ಮಾರಾಟಗಾರನು ನೋಂದಾಯಿತ ಕ್ರಯಪತ್ರವನ್ನು ಕಾರ್ಯರೂಪಕ್ಕೆ ತರತಕ್ಕದ್ದು' ಎಂಬ ಮಟ್ಟಿಗೆ ಒಪ್ಪಂದ ಪತ್ರದಲ್ಲಿ ಒಕ್ಕಣೆಯಿರುತ್ತದೆ. ಆದ್ದರಿಂದ ಅಧಿನಿಯಮದ ಅನುಸೂಚಿಯ 5(ಇ)(i) ಅನುಚ್ಛೇದವು ಅನ್ವಯವಾಗುವುದಿಲ್ಲ. ಈ ರಿಟ್ ಅರ್ಜಿಯಲ್ಲಿ ಯಾವುದೇ ಗುಣಾರ್ಹತೆಗಳಿರುವುದಿಲ್ಲ. ತದನುಸಾರವಾಗಿ ಈ ಅರ್ಜಿಯನ್ನು ವಜಾಗೊಳಿಸಲಾಗಿದೆ.